Sri A. G. RAMACHANDRA RAO.— There is no repugnance at all there. The Conciliation Officer works under the Labour Commissioner and the report passes through him.

Lady Investigators, Inspectresses and Assistant Inspectresses of Factories.

Q.—313. **Sri D. VENKATESH** (Gandhinagar).—

Will the Government be pleased to state:—

the number of Lady Investigators, Inspectresses and Assistant Inspectresses of Factories?

A.—**Sri A. G. RAMACHANDRA RAO** (Minister for Law and Education).—

Two Lady Investigators, one Inspectress of Factories and one Assistant Inspectress of Factories.

Sri D. VENKATESH.—I have no supplementaries.

Sri J. MOHAMED IMAM (Jagalur).—Are there men Investigators, men Inspectors and men Assistant Inspectors also?

Sri A. G. RAMACHANDRA RAO.—The question refers only to ladies.

Sri J. MOHAMED IMAM.—I want to know whether there are men Investigators, men Inspectors and men Assistant Inspectors?

Sri A. G. RAMACHANDRA RAO.—Yes, sir.

Leprosy Survey.

Q.—5. **Sri S. KARIAPPA** (Virupakshapura).—

Will the Government be pleased to state:—

(a) whether they have conducted a survey of sufferers from leprosy in the State;

(b) if so, the number of sufferers in each taluk?

A.—**Sri T. CHANNIAH** (Minister for Public Health and Local Self-Government).—

(a) The survey has not been done for the entire State. This has been done only in endemic areas, where leprosy is rampant.

(b)—

(1) Chamarajnagar	...	28
(2) T.-Narsipur	...	106
(3) Maddur	...	49
(4) Channapatna	...	12
(5) Hoskote	...	27
(6) Goribidnur	...	66
(7) Madhugiri	...	16
(8) Harihar	...	12
(9) Nanjangud	...	10
Total	...	326

ಶ್ರೀ ಎಸ್. ಕರಿಯಪ್ಪ.—326 ಜನ ಕಾಯಿಲೆಯಿಂದ ನರಳುತ್ತಿದ್ದಾರೆಂದು ತಿಳಿಸೋಣವಾಗಿದೆ. ಈ ಪೈಕಿ ಎಷ್ಟು ಜನರನ್ನು ಆಸ್ಪತ್ರೆಗೆ ಸೇರಿಸಲಾಗಿದೆ?

ಶ್ರೀ ಟಿ. ಚೆನ್ನಯ್ಯ.— ಕೆಲವು ರೋಗಿಗಳು ಮೈಸೂರಿನಲ್ಲಿರುವ P. K. Sanatorium, ಬೆಂಗಳೂರಿನಲ್ಲಿರುವ Sanatoria ಮತ್ತು Isolation ಕ್ಯಾಂಪುಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ರೀತಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆಯನ್ನು ನಿರ್ದಿಷ್ಟವಾಗಿ ತಿಳಿಸಲು ಸಧ್ಯಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಕರಿಯಪ್ಪ.—ಕೇವಲ ಅಲ್ಪ ಮಂದಿಗೆ ಮಾತ್ರ ಈ ವ್ಯವಸ್ಥೆಯಿಂದ ಉಪಯೋಗವಾಗುತಿದ್ದು ಹೆಚ್ಚು ರೋಗಿಗಳಿಗೆ ಇದರಿಂದ ಏನೂ ಸಹಾಯವಾಗುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚೆನ್ನಯ್ಯ.—ಆ ವಿಚಾರ ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎಸ್. ಕರಿಯಪ್ಪ.—ಇಲ್ಲಿ ತಾವು ಒದಗಿಸಿರತಕ ಉತ್ತರದಲ್ಲಿ ಕೇವಲ 9 ತಾಲ್ಲೂಕುಗಳಲ್ಲಿ ಮಾತ್ರ ಸರ್ವೆ ನಡೆಸಲಾಗುತ್ತದೆಯೆಂದು ಕಂಡುಬರುತ್ತಿದೆ. ಇನ್ನು ಉಳಿದ ಪ್ರಾಂತದಲ್ಲಿ ಯಾವಾಗ ಸರ್ವೆ ನಡೆಸಲಾಗುತ್ತದೆ?

ಶ್ರೀ ಟಿ. ಚೆನ್ನಯ್ಯ.— ಈಗ ಸರ್ಕಾರದವರ ಗಮನಕ್ಕೆ ಬಂದ ಒಂಭತ್ತು ತಾಲ್ಲೂಕುಗಳಲ್ಲಿ ಮಾತ್ರ ಸರ್ವೆ ನಡೆಸಲಾಗಿದೆ. ಈ ರೋಗ ಇತರ ಕಡೆಗಳಲ್ಲೂ ಇರುತ್ತದೆಯೆಂದು ವರದಿಗಳು ಬಂದರೆ ಆಗ ಅಲ್ಲಿಯೂ ಸರ್ವೆ ಪರಿಶೀಲನೆ ನಡೆಸಲಾಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಕನಕಾಪುರದ ತಾಲ್ಲೂಕಿ ಮದ್ರಾಸ್ ಬಾರ್ಡರಿನಲ್ಲಿದ್ದು, ಅಲ್ಲಿಯವರ ಸಂಪರ್ಕದಿಂದ, ಈ ತಾಲ್ಲೂಕಿನಲ್ಲಿ ಈ ಖಾಯಿಲೆ ಹೆಚ್ಚಾಗಿರುತ್ತದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚೆನ್ನಯ್ಯ.—ಇಲ್ಲ.

ಶ್ರೀ ಎಸ್. ಕರಿಯಪ್ಪ.— ಈಗ ಉಳಿದ ಸ್ಥಳಗಳಲ್ಲೂ ಈ ರೋಗದಿಂದ ಎಷ್ಟು ಜನರು ನರಳುತ್ತಿದ್ದಾರೆಂಬುದನ್ನು ಕಂಡು ಹಿಡಿಯಲು ಸರ್ವೆ ನಡೆಸುತ್ತೀರಾ?

ಶ್ರೀ ಟಿ. ಚೆನ್ನಯ್ಯ.—ಪರಿಶೀಲಿಸೋಣ.

ಶ್ರೀ ಎಸ್. ಕರಿಯಪ್ಪ.—ಟಿ. ನರಸೀಪುರ ತಾಲ್ಲೂಕಿನಲ್ಲಿ ಹೆಚ್ಚು ಸಂಖ್ಯೆ ರೋಗಿಗಳಿರುವುದರಿಂದ ಅವರಿಗೆಲ್ಲ